ಅಧ್ಯಕ್ಷರು:- ನೋಡೋಣ. ಎಲ್ಲಾ ಸೌಕರ್ಯಗಳೂ ಇರಬೇಕಲ್ಲಾ. ಎಲ್ಲಾ ಸೌಕರ್ಯಗಳು ಇದ್ದರೆ ನಡೆಸೋಣ. ನೋಡಿ, ಇದೇ ರೀತಿ ಶ್ರೀಮಾನ್ ಹನುಮಂತಯ್ಯನವರ ಕಾಲದಲ್ಲಿಯೇ ದಕ್ಷಿಣ ಭಾರತದಲ್ಲಿ ಲೋಕಸಭೆ ಹಾಗೂ ರಾಜ್ಯಸಭೆ ಅಧಿವೇಶನ ನಡೆಯಬೇಕೆಂದು ಹೇಳಿ ಈ ವಿಧಾನಸೌಧವನ್ನು ಕಟ್ಟಿಸಿರುವುದು ಎಂದು ಅವರು ಅನೇಕ ಬಾರಿ ಹೇಳಿರುವುದು ನಮಗೆ ಜ್ಞಾಪಕವಿದೆ. ಆದುದರಿಂದ ಅದರ ಬಗ್ಗೆ ಲೋಕಸಭೆಯವರು ಮತ್ತು ಸೆಂಟ್ರಲ್ ಗೌವರ್ನಮೆಂಟ್‌ನವರು ಡಿಸೈಡ್ ಮಾಡಬೇಕು.

ಶ್ರೀ ಜೆ.ಟಿ. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಕೂಡಲಸಂಗಮದಲ್ಲಿ ಅಧಿವೇಶನ ಮಾಡಿದರೆ ಬಹಳ ಚೆನ್ನಾಗಿರುತ್ತದೆ.

ಅಧ್ಯಕ್ಷರು:- ಎಲ್ಲಾ ಅನುಕೂಲಗಳೂ ಇದ್ದರೆ ಅಲ್ಲಿಯೇ ಮಾಡೋಣ ಬಿಡಿ. ಬೆಳಗಾಂ ಡಿವಿಶನ್‌ನಲ್ಲಿಯೇ ನೋಡೋಣ. ಮೊದಲು ನಾನು ಮತ್ತು ಸಭಾಪತಿಗಳು ಹೋಗಿ ನೋಡಿಕೊಂಡು ಬರುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯ ಹೇಳಬಯಸುತ್ತೇನೆ. ಈಗ ತಾವು ಯಾವ ರೀತಿಯಲ್ಲಿ ಪಾಸಿಟಿವ್ ಆಗಿ ಪ್ರತಿಕ್ರಿಯೆ ಮಾಡಿದ್ದೀರಿ. ಅದೇ ರೀತಿ ಸಮ್ಮೇಳನದ ಇನ್ನಿತರ ನಿರ್ಣಯದ ಬಗ್ಗೆ ಸರ್ಕಾರದವರು ಪ್ರತಿಕ್ರಿಯೆ ವ್ಯಕ್ತಮಾಡಲಿ. ಇಲ್ಲಿ ಮಾನ್ಯ ಗೃಹ ಸಚಿವರು ಇದ್ದಾರೆ, ನಿನ್ನೆ ಮಾನ್ಯ ಕೌಜಲಗಿಯವರು ಅಧಿವೇಶನದಲ್ಲಿ ಸರ್ಕಾರಿ ಧೋರಣೆಯ ಬಗ್ಗೆ ಹೇಳಿದ್ದಾರೆ. ಈಗ ಸದನದಲ್ಲಿ ಸರ್ಕಾರದ ನಿಲುವು ಏನು ಎಂಬ ಬಗ್ಗೆ ತಿಳಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು :- ಮಾನ್ಯ ಕೌಜಲಗಿಯವರೆ, ಈ ಬಗ್ಗೆ ಸರ್ಕಾರದ ಗಮನಕ್ಕೆ ತನ್ನಿ.

ಶ್ರೀ ವಿ.ಎಸ್. ಕೌಜಲಗಿ :- ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳನ್ನು ಸರ್ಕಾರವೇ ಪರಿಶೀಲನೆ ಮಾಡಿ ತೀವ್ರಗತಿಯಲ್ಲಿ ಕ್ರಮ ಕೈಗೊಳ್ಳುತ್ತದೆ ಎಂದು ನಾನು ಹೇಳಿದ್ದೇನೆ.

ಅಧ್ಯಕ್ಷರು :- ಆಯಿತು ಬಿಡಿ.

(ಇ) ಹಿರೇಕೆರೂರಿನ ಶ್ರೀ ಬಸವೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ನಾನು ಒಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಬಸವೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ ಬಗ್ಗೆ ವಿಷಯ ತಿಳಿಸಿದ್ದೆ.

ಅಧ್ಯಕ್ಷರು :- ಈಗ ಸಕ್ಕರೆ ಸಚಿವರು ಇಲ್ಲವಲ್ಲಾ.

ಶ್ರೀ ಜಗದೀಶ್ ಶೆಟ್ಟರ್ :- ಸಹಕಾರ ಸಚಿವರು ಇದ್ದಾರೆ. ಅವರು ಉತ್ತರ ಕೊಡಲಿ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಕೊಡಿ ಎಂದು ತಮ್ಮನ್ನು ಕೇಳಿದ್ದೆ.

ಅಧ್ಯಕ್ಷರು :- ಹೇಳಿ. ಇಬ್ಬರೂ ಒಂದೇ ವಿಷಯ ತಾನೆ.

ಶ್ರೀ ಎಸ್.ಎಸ್. ಪಾಟೀಲ್ :- ನಾನು ಬೇರೆ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು :- ಆಯಿತು. ಈಗ ಮೊದಲು ವಿರೋಧ ಪಕ್ಷದ ನಾಯಕರು ಮಾತನಾಡಲಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಹಿರೆಕೆರೂರಿನಲ್ಲಿರುವ ಶ್ರೀ ಬಸವೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ 1996-97 ರಲ್ಲಿಯೇ ಪ್ರಾರಂಭವಾಗಿದೆ. ಶೇರು ಕಲೆಕ್ಷನ್ ಚಾಲೂ ಆಗಿದೆ. ಆದರೆ ಅಲ್ಲಿ ಏನಾಗಿದೆಯೆಂದರೆ ಈ ಒಂದು ಫ್ಯಾಕ್ಟರಿಯನ್ನು ಪ್ರಾರಂಭ ಮಾಡಲು ಸಂಘಟನೆ ಮಾಡಿದಂಥವರು, ಅದು 37 ಗ್ರಾಮಗಳಿಗೆ ಅನ್ವಯವಾಗುವಂಥದ್ದು. ಒಟ್ಟು ರೈತರಿಂದ ಹಾಗೂ ಬೇರೆ ಬೇರೆ ವರ್ಗದ ಜನರಿಂದ ಕೆ.ಸಿ.ಸಿ. ಬ್ಯಾಂಕ್, ಅಂದರೆ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ಮುಖಾಂತರ ಸಾಲ ಕೊಡಿಸಿ ನಿಮ್ಮನ್ನು ಶೇರುದಾರರನ್ನಾಗಿ ಮಾಡುತ್ತವೆಂದು ಸಾಲವನ್ನು ಕೊಡಿಸಿದ್ದಾರೆ ಈ ಸಂಘಟಿಕರು. ಒಟ್ಟು 4 ಕೋಟಿ 9 ಲಕ್ಷ ರೂ.ಗಳ ಹಣವನ್ನು ಸಂಗ್ರಹ ಮಾಡಿದ್ದಾರೆ. ಆದರೆ ಎಲ್ಲರಿಗೂ ಶೇರು ಹೋಲ್ಡರ್‌ಗಳನ್ನಾಗಿ ಅವರು ಮಾಡಲಿಲ್ಲ. ಒಂದು ಅಮಾನತ್ತು ಖಾತೆ ಎಂದು ತೆರೆದು ಅದರಲ್ಲಿ 1 ಕೋಟಿ 10 ಲಕ್ಷ ರೂ. ಗಳನ್ನು ಜಮಾ ಮಾಡಿದ್ದಾರೆ. ಇದು ಯಾರೆಂದರೆ ಆ ರೈತರ ಮೇಲೆ ಮತ್ತು ಯಾರು ಆ. ಕೆ.ಸಿ.ಸಿ. ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡಿದ್ದಾರೆ ಆ ಸಹಕಾರ ಸಂಘದ ಮುಖಾಂತರ, ಅವರ ಮೇಲೆ ಹತ್ತು ಸಾವಿರ ರೂಪಾಯಿ ಸಾಲ, ಆ ಸಾಲಕ್ಕೆ ಇದುವರೆಗೆ ಬಡ್ಡಿ ಎಲ್ಲಾ ಸೇರಿ 21 ಸಾವಿರ ರೂಪಾಯಿಗಳಾಗಿದೆ. ಇವೊತ್ತು ಆ ಸಾಲ ವಸೂಲಾತಿಗಾಗಿ ರೈತರಿಗೆ ಕೆ.ಸಿ.ಸಿ. ಬ್ಯಾಂಕ್‌ರವರು ನೋಟಿಸ್ ಕಳುಹಿಸಿದ್ದಾರೆ. ಇವರಲ್ಲಿ ಎಷ್ಟೋ ಜನರಿಗೆ ಸಹಕಾರ ಸಂಘದ ಮೂಲಕ ಬ್ಯಾಂಕ್‌ನಿಂದ ಸಾಲ ಪಡೆದು ಶೇರುದಾರರಾಗಲು ಸಹಕಾರ ಸಕ್ಕರೆ ಕಾರ್ಖಾನೆಗೆ ಹಣ ಕೊಟ್ಟಿದ್ದು ಎನ್ನುವುದು ಇವೊತ್ತು ಗೊತ್ತಾಗುತ್ತಿದೆ. ಇವೊತ್ತು ನೋಟಿಸ್ ರೈತರಿಗೆ ಕೊಟ್ಟಿದ್ದಾರೆ. ಕಳೆದ ಒಂದು ವರ್ಷದಿಂದ ಹೋರಾಟ ಮಾಡುತ್ತಿದ್ದಾರೆ. ಆದರೆ ಇದುವರೆಗೂ ಅವರು ಶೇರುದಾರರಾಗಿಲ್ಲ. ಅದಕ್ಕಾಗಿ ಈಗಾಗಲೇ ಸಕ್ಕರೆ ನಿರ್ದೇಶಕರು ಡೈರಕ್ಷನ್ ಕೊಟ್ಟಿದ್ದಾರೆ ಮತ್ತು ಸಹಕಾರ ಇಲಾಖೆಯಿಂದ ಡೈರಕ್ಷನ್ ಹೋಗಿದೆ. ಏನೆಂದರೆ, ಯಾರು ಶೇರುದಾರರು ಆಗಿಲ್ಲ ಮತ್ತು ಯಾರಿಗೆ ಶೇರುದಾರರಾಗಲು ಮನಸ್ಸಿಲ್ಲವೋ, ಇವೊತ್ತು ಸಾಲ ಮಾಡಿ ಅವರಿಂದ ಹಣವನ್ನು ಏನು ಸಂಗ್ರಹ ಮಾಡಿದ್ದೀರಿ ಆ ಹಣವನ್ನು ಅವರಿಗೆ ತಕ್ಷಣವೇ ವಾಪಸ್ಸು ಕೊಡಬೇಕು ಎನ್ನುವುದರ ಬಗ್ಗೆ ಈಗಾಗಲೇ ಸರ್ಕಾರದ ಮಟ್ಟದಲ್ಲಿ ಚರ್ಚೆಗಳಾಗಿವೆ ಮತ್ತು ನಿರ್ಣಯಗಳಾಗಿವೆ. ಹೀಗಾಗಿ ಇವೊತ್ತು ಕಳೆದ ಮೂರು ತಿಂಗಳಿನಿಂದಲೂ ಆ ಸಕ್ಕರೆ ಕಾರ್ಖಾನೆ ಮುಂದೆ ರೈತರು ಧರಣಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಇವೊತ್ತಿನ ದಿವಸ ಆ ಸಕ್ಕರೆ ಕಾರ್ಖಾನೆ ಮುಂದೆ ಸುಮಾರು ಹದಿನಾರು ಸಾವಿರ ಜನರು ಈ ಬಗ್ಗೆ ಅಲ್ಲಿ ಹೋರಾಟ ಮಾಡುತ್ತಿದ್ದಾರೆ. ಅದಕ್ಕಾಗಿ ನಾನು ಕೇಳುತ್ತಿದ್ದೇನೆ ಈ ಬಗ್ಗೆ ಸರ್ಕಾರದ ನಿರ್ದಿಷ್ಟ ಕ್ರಮಗಳೇನು? ಯಾರು ಸಾಲವನ್ನು ಮಾಡಿದ್ದಾರೆ ಅವರಿಗೆ ಹಣವನ್ನು ಮರುಪಾವತಿ ಮಾಡುವ ಬಗ್ಗೆ ಏನು ನಿರ್ಣಯಗಳನ್ನು ತೆಗೆದುಕೊಂಡಿದ್ದೀರಿ? ತಕ್ಷಣವೇ ಆ ಹಣವನ್ನು ಮರುಪಾವತಿ ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಮಾನ್ಯ ಸಹಕಾರ ಸಚಿವರು ಸರ್ಕಾರದ ನಿಲುವೇನು ಎಂಬ ಬಗ್ಗೆ ದಯವಿಟ್ಟು ಹೇಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರತಕ್ಕಂಥ ವಿಷಯ, ಅದು ಬಸವೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಗೆ ಶೇರುದಾರರಾಗಿ ನಮ್ಮ ಹತ್ತಿರ ಹಣ ಇಲ್ಲ ನಾವು ಸಾಲ ತೆಗೆದುಕೊಂಡು ಶೇರುದಾರರಾಗಬೇಕು ಎನ್ನತಕ್ಕಂಥ ಅರ್ಜಿಯ ಆಧಾರದ ಮೇಲೆ ಮತ್ತು

ಆಯಾಯಾ ಆಡಳಿತ ಮಂಡಳಿಯ ರೆಸಲ್ಯೂಶನ್‌ಗಳ ಮೇಲೆ ಸಾಲ ಕೊಟ್ಟು ಕೆ.ಸಿ.ಸಿ. ಬ್ಯಾಂಕ್‌ನಿಂದ ಮತ್ತೆ ಅದು ವಿ.ಎಸ್.ಎಸ್ ಎನ್.ಗಳಿಗೆ ಹೋಗಿ ಮತ್ತೆ ಇಲ್ಲಿ ಜಮಾ ಆಗಿರತಕ್ಕಂಥದ್ದು. ಆದ್ದರಿಂದ ಯಾವ ಉದ್ದೇಶಕ್ಕೋಸ್ಕರ ಅವರು ಸಾಲ ತೆಗೆದುಕೊಂಡಿದ್ದರೋ ಆ ಉದ್ದೇಶಕ್ಕೆ ಅಲ್ಲಿ ಹಣ ಸಂದಾಯವಾಗಿದೆ. ಮತ್ತೆ ಮರುಪಾವತಿ ಮಾಡಬೇಕಾದ ಪ್ರಶ್ನೆ ಇದರಲ್ಲಿ ಇಲ್ಲ. ನಿಜ, ಧರಣಿ ಮಾಡುತ್ತಿದ್ದಾರೆ ಕೆಲವರು, ಯಾರಿಗೆ ಶೇರು ಸಂಗ್ರಹಕ್ಕೆ ದೀಪ ಹಚ್ಚಿ ಇದಕ್ಕೆ ಚಾಲನೆ ಕೊಟ್ಟರೋ ಅವರೂ ಕೂಡ ಅಲ್ಲಿ, ನಾವು ಧರಣಿ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿರುವುದು ಇದೆ. ಆದರೆ ನೇರವಾಗಿ ಯಾವುದೇ ಸದಸ್ಯರುಗಳೂ ಕೂಡ ಸರ್ಕಾರಕ್ಕೆ ಈವರೆಗೂ ಯಾರೂ ಈ ಸಾಲವನ್ನು ತೆಗೆದುಕೊಂಡು ಶೇರುದಾರರಾಗಿದ್ದಾರೋ ಅವರುಗಳು ಸರ್ಕಾರಕ್ಕೆ ನಮ್ಮ ಹಣವನ್ನು ವಾಪಸ್ಸು ಕೊಡಬೇಕು ಎಂದು ಆಗ್ರಹಪೂರ್ವಕವಾಗಿ ನೇರವಾದಂಥ ಮನವಿಗಳನ್ನು ಸರ್ಕಾರಕ್ಕೆ ಕೊಟ್ಟಿಲ್ಲ. ಅಂಥ ಮನವಿಗಳು ಇದುವರೆಗೆ ಸರ್ಕಾರಕ್ಕೆ ತಲುಪಿಲ್ಲ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಅಲ್ಲಿ ಧರಣಿಗಳು ಆಗುತ್ತಿದೆ, ಧರಣಿ ಮಾಡುತ್ತಿರುವವರು ಕೂಡ ನನ್ನ ಜೊತೆ ಮಾತನಾಡಿದ್ದಾರೆ. ಆದರೆ ಇಲ್ಲಿ ಸಕ್ಕರೆ ಕಾರ್ಖಾನೆಯನ್ನು ಕಟ್ಟುವ ಮತ್ತು ಅದರಿಂದ ಫಲವನ್ನು ಅನುಭವಿಸುವ ದೃಷ್ಟಿಯಿಂದ ಯಾರು ಹಣವನ್ನು ಸಾಲವಾಗಿ ಪಡೆದುಕೊಂಡು ಮತ್ತೆ ಅಲ್ಲಿ ಕಟ್ಟಿದ್ದಾರೋ ಅವರು ಅಂಥ ತೀವ್ರತರವಾಗಿ ನಮಗೆ ಹಣ ವಾಪಸ್ಸು ಬೇಕೇ ಬೇಕು ಎಂದು ಕೇಳತಕ್ಕಂಥ ಹೆಚ್ಚಿಗೆ ಜನರು ಯಾರೂ ಇಲ್ಲ ಎನ್ನುವುದನ್ನು ನಾನು ಹೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸರಿಯಾದ ಮಾಹಿತಿಯನ್ನು ಕೊಡುತ್ತಿಲ್ಲವೆಂದು ನಾನು ಹೇಳಬಯಸುತ್ತೇನೆ. ಸಚಿವರು ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಹಾಗಾದರೆ ಅಮಾನತ್ತು ಖಾತೆಯಲ್ಲಿ 1 ಕೋಟಿ 10 ಲಕ್ಷ ರೂಪಾಯಿಗಳನ್ನು ಏಕೆ ಜಮಾ ಮಾಡಲಾಗಿದೆ? ಶೇರು ಹಣವೆಂದು ಕಲೆಕ್ಟ್ ಮಾಡಿದಮೇಲೆ ಅವರುಗಳನ್ನೂ ಶೇರುದಾರರನ್ನಾಗಿ ಏಕೆ ಇದುವರೆಗೂ ಮಾಡಲಿಲ್ಲ? ಸಚಿವರು ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಯಾರದೋ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವುದಕ್ಕೆ ಸಚಿವರು ಹೋಗುತ್ತಿದ್ದಾರೆ. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಸರ್ಕಾರದ ಕಾರ್ಯದರ್ಶಿಗಳ ಪ್ರೊಸೀಡಿಂಗ್ಸ್‌ನಲ್ಲಿ ಏನಿದೆಯೆಂದರೆ ಶೇರು ಹಣವನ್ನು ಈಗಾಗಲೇ ಸಂಗ್ರಹಿಸಿ ಶೇರು ನೊಂದಾವಣೆ ಮಾಡದೇ ಅನಿರ್ದಿಷ್ಟ ಕಾಲ ವಿಷಯವನ್ನು ಮುಂದುವರೆಸುವುದು ಎಲ್ಲಾ ರೀತಿಯಿಂದಲೂ ಸಮಂಜಸವಲ್ಲವೆಂದು ಸರ್ಕಾರ ಭಾವಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿದ್ದಾರೆ. ಸರ್ಕಾರದಲ್ಲಿ ಪ್ರೊಸೀಡಿಂಗ್ಸ್ ನಡೆಯುತ್ತಾ ಇವೆ. ಕಾರ್ಯದರ್ಶಿಗಳ ಮಟ್ಟದಲ್ಲಿ ಚರ್ಚೆ ನಡೆಯುತ್ತಾ ಇದೆ. ಯಾರು ಆ ಅಮಾನತ್ತು ಖಾತೆಯಲ್ಲಿ 1 ಕೋಟಿ 10 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರಲ್ಲಾ ಆ ಹಣವನ್ನು ಅವರುಗಳಿಗೆ ವಾಪಸ್ಸು ಕೊಡಬೇಕೆಂದು ನಿರ್ಣಯಗಳು ಸರ್ಕಾರದ ಮಟ್ಟದಲ್ಲಿ ಆಗಿವೆ. ಅದರ ಬಗ್ಗೆ ನಿಮಗೆ ಏನೂ ಮಾಹಿತಿ ಇಲ್ಲ ಎಂದರೆ ನನಗೆ ಬಹುಶಃ ನೀವು ಯಾರದೋ ಹಿತಾಸಕ್ತಿ ಕಾಪಾಡುವುದಕ್ಕೆ ಹೋಗುತ್ತಿದ್ದೀರಿ ಎಂದು ನಾನು ಆಪಾದನೆ ಮಾಡಬೇಕಾಗುತ್ತದೆ. ಆದುದರಿಂದ ಒಂದು ಕೋಟಿ ಹತ್ತು ಲಕ್ಷ ರೂಪಾಯಿ ಬಗ್ಗೆ ಏನು ಹೇಳುತ್ತೀರಿ? ಅಲ್ಲಿ ಯಾರು ಹಣ ಸಾಲ ಮಾಡಿ ಕೊಟ್ಟಿದ್ದಾರೆ ಅವರು ನಮಗೆ ವಾಪಸ್ಸು ಮಾಡಿ ಎಂದು ಕೇಳುತ್ತಿದ್ದಾರೆ. ಯಾರು ಷೇರುದಾರರಾಗಿದ್ದಾರೆ ಅದು ಬಿಡಿ. ಆದರೆ ಯಾರೂ ಇನ್ನು ಷೇರುದಾರರು ಆಗಿಲ್ಲ ಅವರಿಗೆ ಷೇರ್ ಸರ್ಟಿಫಿಕೇಟ್ ಸಿಕ್ಕಿಲ್ಲ, ಅವರಿಗೆ ಹಣ ವಾಪಸ್ಸು ಕೊಟ್ಟಿಲ್ಲ. ಅವರು ಇನ್ನು

ಷೇರ್ ಹೋಲ್ಡರ್ಸ್ ಆಗಿಲ್ಲ. ಅಮಾನತ್ತು ಅಕೌಂಟ್‌ನಲ್ಲಿರುವಂತಹ ಒಂದು ಕೋಟಿ ಹತ್ತು ಲಕ್ಷ ರೂಪಾಯಿ ವಾಪಸ್ಸು ಮಾಡುವುದಕ್ಕೆ ನಿಮ್ಮ ಸರ್ಕಾರದ ನಿಲುವೇನು ಎಂದು ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಹೆಚ್. ವಿಶ್ವನಾಥ್:- ಯಾವ ಸದಸ್ಯರು ನೋಂದಾವಣೆ ಆಗಿರತಕ್ಕಂಥವರು ಬಿಟ್ಟು, ಒಂದು ಕೋಟಿ ಹತ್ತು ಲಕ್ಷ ರೂಪಾಯಿ ಏನಿದೆ. ಅದನ್ನು ಕೊಡಬೇಕೆಂದು ಹೇಳಿದ್ದಾರೆ, ಆ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಸದನದಲ್ಲಿ ನಾಳೆ ನಾಡಿದ್ದರಲ್ಲಿ ಗಮನ ಸೆಳೆಯುವ ಸೂಚನೆ ಬರುತ್ತಿದೆ. ಪೂರ್ಣ ವಿವರದೊಂದಿಗೆ ತಮಗೆ ಉತ್ತರ ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :- ನಾವು ದಯವಿಟ್ಟು ಇದರ ಬಗ್ಗೆ ಗಮನಹರಿಸಬೇಕು. ಒಂದು ಕೋಟಿ ಹತ್ತು ಲಕ್ಷ ರೂಪಾಯಿ ಅಮಾನತ್ತು ಅಕೌಂಟ್‌ನಲ್ಲಿ ಇದೆಯಲ್ಲಾ ಅದನ್ನು ವಾಪಸ್ಸು ಕೊಡುವ ಬಗ್ಗೆ ನೀವು ಒಂದು ನಿರ್ಣಯ ಕೈಗೊಳ್ಳಬೇಕಾಗುತ್ತದೆ. ನೀವು ಅದರ ಬಗ್ಗೆ ಡೈರೆಕ್ಷನ್ ಕೊಡಬೇಕಾಗುತ್ತದೆ. ಇಲ್ಲದೆ ಇದ್ದರೆ ಯಾರು ಸಾಲ ಮಾಡಿದ್ದಾರೆ ಅವರು ಬೀದಿಗೆ ಬೀಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ತಾವು ಯಾರದೋ ಹಿತಾಸಕ್ತಿ ಕಾಪಾಡುವುದಕ್ಕೆ ಹೋಗಬೇಡಿ. ಅಲ್ಲಿರುವಂತಹ ರೈತರ ಹಿತಾಸಕ್ತಿ ಕಾಪಾಡಿ. ನಿಮಗೆ ಈಗಾಗಲೆ ಕಿವಿಮಾತು ಹೇಳಿದ್ದಾರೆ, ಅಂತಹವರ ಮಾತನ್ನು ಕೇಳುವುದಕ್ಕೆ ಹೋಗಬೇಡಿ. ರೈತರು ಏನು ಸಾಲ ಮಾಡಿದ್ದಾರೆ, ಅದು ಈಗಾಗಲೆ ಹತ್ತು ಸಾವಿರ ರೂಪಾಯಿ ಇದ್ದದ್ದು 21 ಸಾವಿರ ರೂಪಾಯಿ ಆಗಿದೆ. ನೋಟೀಸ್ ಇಶ್ಯೂ ಆಗಿದೆ. ವಸೂಲಾತಿ ನಡೆಯುತ್ತಿದೆ. ಅವರ ಹಿತಾಸಕ್ತಿ ನೋಡಿ, ಯಾರದೋ ಹಿತಾಸಕ್ತಿ ನೋಡುವುದಕ್ಕೆ ಹೋಗಬೇಡಿ. ಒಂದು ಕೋಟಿ ಹತ್ತು ಲಕ್ಷ ರೂಪಾಯಿ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಗಮನ ಸೆಳೆಯುವ ಸೂಚನೆ ತೆಗೆದುಕೊಂಡಾಗ ಅದಕ್ಕೆ ಉತ್ತರ ಕೊಡುತ್ತೀರಿ, ಅದರ ಬಗ್ಗೆ ಚರ್ಚೆ ಮಾಡೋಣ. ಆದರೆ ಈ ವಿಚಾರಕ್ಕೆ ತಕ್ಷಣ ಒಂದು ಪರಿಹಾರ ಹುಡುಕುವಂತಾದ್ದು ತಮ್ಮ ಕಡೆಯಿಂದ ಆಗಬೇಕು. ಇದರ ಬಗ್ಗೆ ತಮ್ಮ ಹತ್ತಿರ ಮಾಹಿತಿ ಇದೆ. ಆದರೆ ನೀವು ವಿಷಯವನ್ನು ಹೊರಗೆ ಬಿಡುತ್ತಿಲ್ಲ. ನಿಮಗೆ ಎಲ್ಲಾ ವಿಷಯ ಗೊತ್ತಿದೆ. ಹಾಗೂ ತಾವು ಬಹಳ ದಿವಸದ ಮೇಲೆ ಸದನಕ್ಕೆ ಬಂದಿದ್ದೀರಿ. ನಮಗೆ ಒಂದು ಕೋಟಿ ಹತ್ತು ಲಕ್ಷ ರೂಪಾಯಿ ಬಗ್ಗೆ ಒಂದು ಸ್ಪಷ್ಟ ಉತ್ತರ ಹೇಳಿ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನನ್ನದು ಒಂದು ವಿನಂತಿ ಇದೆ. ನೀವು ಸಹಕಾರ ಸಚಿವರಿದ್ದೀರಿ. ಷೇರ್ ಮೊಬಲೈಸೇಷನ್ ಮಾಡುವಾಗ ಒಂದು ಕಂಡೀಷನ್ ಇದ್ದೇ ಇರುತ್ತದೆ. ಆ ಇಂಟರೆಸ್ಟ್ ಅನ್ನು ಆ ಸಂಸ್ಥೆಯವರಾದರೂ ಬೇರೆ ಮಾಡಬೇಕು, ಇಲ್ಲದೆ ಇದ್ದರೆ ರೈತನಾದರೂ ಬೇರೆ ಮಾಡಬೇಕು. ಸೊಸೈಟಿ ಕೂಡ ಡಿಫಾಲ್ಟರ್ ಆಗುತ್ತದೆ, ಆ ಷೇರ್ ಸದಸ್ಯರ ಡಿಪಾಲ್ಟರ್ ಆಗುವುದಷ್ಟೇ ಅಲ್ಲ. ಆ ಸೊಸೈಟಿಗೆ ಆದರೂ ಕೂಡ ಹೊರೆಯಾಗುತ್ತದೆ ಎನ್ನುವುದು ಅರಿವು ಈ ಸಂಸ್ಥೆಯವರಿಗೆ ಬೇಕು. ನಾಲ್ಕು ವರ್ಷದ ಹಿಂದೆ ಷೇರ್ ಎತ್ತಿ ಐದು ವರ್ಷವಾದರೂ ಅದನ್ನು ಕಟ್ಟದೆ ಇದ್ದರೆ ಸೊಸೈಟಿ ಷೇರ್ ಹೋಲ್ಡರ್ ಇಫಾಲ್ಟರ್ ಎಂದರೆ ನೀವಾದರೂ ಅದನ್ನು ಒಪ್ಪುತ್ತೀರಾ? ಅದನ್ನು ನಿಮ್ಮ ಆತ್ಮವಾದರೂ ಒಪ್ಪುತ್ತಾದಾ? ನೀವೆ ಹೇಳಿ.

ಶ್ರೀ ಹೆಚ್. ವಿಶ್ವನಾಥ್ :- ಅದಕ್ಕೇ ಸಂಪೂರ್ಣ ಆತ್ಮ ಪರಮಾತ್ಮನ ಬಗ್ಗೆ ಗಮನ ಸೆಳೆಯುವ ಸೂಚನೆಯಲ್ಲಿ ಇದೆ ಎಲ್ಲಾ ಪೂರ್ಣ ವಿವರಗಳನ್ನು ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :- ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಮಾನ್ಯ ಸಚಿವರು ಇದನ್ನು ಲಘುವಾಗಿ ತೆಗೆದುಕೊಳ್ಳುತ್ತಿದ್ದಾರೆ. ಇವತ್ತು ರೈತರು ಬೀದಿಗೆ ಬಿದ್ದು ಸಾಯುತ್ತಿದ್ದಾರೆ. ಒಂದು ಕೋಟಿ ಹತ್ತು ಲಕ್ಷ ರೂಪಾಯಿ ಇವತ್ತು ಅಮಾನತ್ತು ಅಕೌಂಟ್‌ನಲ್ಲಿ ಬಿದ್ದಿದೆ. ಕೊಳೆಯುತ್ತಿದೆ, ಅದಕ್ಕೆ ಜವಾಬ್ದಾರರು ಯಾರು ಆಗುತ್ತಾರೆ? ಯಾರದೋ ಹಿತಾಸಕ್ತಿ ಕಾಪಾಡುವ ಸಲುವಾಗಿ ಈ ರೀತಿಯಾದಂತಹ ಉತ್ತರ ಕೊಡುತ್ತಿದ್ದಾರೆ ಸದನಕ್ಕೂ ಮರ್ಯಾದೆ ಇಲ್ಲ, ಇವರು ಹೇಳುವ ಉತ್ತರಕ್ಕೂ ಏನೂ ಮರ್ಯಾದೆ ಇಲ್ಲ. ನಿಮ್ಮ ಸ್ವಂತ ಅಭಿಪ್ರಾಯ ಹೇಳಿ ಎಂದರೆ ಹೇಳುವುದಕ್ಕೆ ತಯಾರಿಲ್ಲ. ಒಂದು ಕೋಟಿ ಹತ್ತು ಲಕ್ಷ ರೂಪಾಯಿ ಅಮಾನತ್ತು ಅಕೌಂಟ್‌ನಲ್ಲಿ ಬಿದ್ದಿದೆ. ಅದರ ಬಗ್ಗೆ ಸಹಕಾರ ಸಚಿವರಿಗೆ ಮಾಹಿತಿ ಗೊತ್ತಿದೆ. ಅವರು ಆ ವಿಷಯವನ್ನು ಹೊರಗೆ ಹಾಕುತ್ತಿಲ್ಲ. ಒಂದು ಕೋಟಿ ಹತ್ತು ಲಕ್ಷ ರೂಪಾಯಿ ಬಗ್ಗೆ ಹೇಳಿ.

ಅಧ್ಯಕ್ಷರು:- ನಾಳೆ ಉತ್ತರ ಹೇಳುತ್ತಾರೆ ಬಿಡಿ.

ಶ್ರೀ ಕರಿಯಣ್ಣ:- ಅವರು ಉತ್ತರ ಹೇಳುತ್ತೇನೆ ಎಂದು ಹೇಳುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ:- ಸಹಕಾರ ಸಚಿವರು ಅಸಹಕಾರ ಉತ್ತರ ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು:- ತಾವು ಸಚಿವರು ಏನಾದರೂ ಉತ್ತರ ಹೇಳುವುದಿದ್ದರೆ ಹೇಳಿ.

ಶ್ರೀ ಹೆಚ್. ವಿಶ್ವನಾಥ್:- ಶೂನ್ಯ ವೇಳೆಯಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ. ಸಂಪೂರ್ಣವಾದ ವಿವರಗಳನ್ನು ನಾವು ಕೊಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಒಂದು ಕೋಟಿ ಹತ್ತು ಲಕ್ಷ ರೂಪಾಯಿ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ.

ಅಧ್ಯಕ್ಷರು:- ನಾಳೆ ಅಥವಾ ನಾಡಿದ್ದು ಹೇಳುತ್ತೇವೆಂದು ಉತ್ತರ ಹೇಳುತ್ತಿದ್ದಾರೆ. ತಕ್ಷಣ ಉತ್ತರ ಇರಬೇಕಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಎಲ್ಲಾ ಅವರಿಗೆ ಗೊತ್ತಿದೆ.

Mr. SPEAKER:- No arguments please ತಾವು ರೈಸ್ ಮಾಡಬಹುದು ಅಷ್ಟೇ ಹೊರತು ಚರ್ಚೆ ಮಾಡುವ ಹಾಗೆ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್:- ನಾನು ಒಪ್ಪಿಕೊಳ್ಳುತ್ತೇನೆ. ಇದು ಬಹಳ ಗಂಭೀರವಾದ ಪ್ರಶ್ನೆ. ಸಾವಿರಾರು ರೈತರು ಬೀದಿಗೆ ಬಿದ್ದಿದ್ದಾರೆ.

ಅಧ್ಯಕ್ಷರು:- ಗಂಭೀರವಾದ ಪ್ರಶ್ನೆ ಎಂದೇ ಅಲೋ ಮಾಡಿದ್ದು.

ಶ್ರೀ ಜಗದೀಶ್ ಶೆಟ್ಟರ್:- ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿಲ್ಲ.

ಅಧ್ಯಕ್ಷರು:- ಅದರ ಬಗ್ಗೆ ನಾಳೆ ಹೇಳುತ್ತೇವೆಂದು ಹೇಳಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ನಮ್ಮ ರಕ್ಷಣೆಗೆ ತಾವು ಬರಬೇಕು. ಶೂನ್ಯವೇಳೆ ಪ್ರಸ್ತಾಪ ಎಂದರೆ ನಾವು ಗೋಡೆ ಎದುರಿಗೆ ಮಾತನಾಡುವುದಾ? ಅವರ ಹತ್ತಿರ ಎಲ್ಲಾ ಮಾಹಿತಿ ಇದ್ದಾಗಲೂ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು:- ಹಾಗಾದರೆ ಒಂದು ಕೆಲಸ ಮಾಡೋಣ. ಅವರಿಂದ ಉತ್ತರ ಬಂದಮೇಲೆ ಒಂದೇ ಸಲ ಚರ್ಚೆ ಮಾಡೋಣ ಎಂದು ಹೇಳಿದೆ ತಾವು ಏನು ಹೇಳುತ್ತೀರಿ ಎಂದರೆ ನಾವು ರೈಸ್ ಮಾಡುತ್ತೇವೆ ಮತ್ತೆ ಏನೂ ಮಾಡುವುದಿಲ್ಲವೆಂದು ಇಲ್ಲಿ ಬಂದು ಉತ್ತರ ಕೇಳುತ್ತೀರಿ ತಾವು ಸಮಯ ಕೊಡಿ. ಉತ್ತರ ಕೊಡುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ:- ಅವರಿಗೆ ಉತ್ತರ ಗೊತ್ತಿದೆ.

ಅಧ್ಯಕ್ಷರು:- ತಕ್ಷಣ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. It is not allowed ಅವರಿಗೆ ಸಮಯ ಕೊಡಬೇಕಾಗುತ್ತದೆ. ಇನ್ನು ಮೇಲೆ ನಾನು ಅಲೋ ಮಾಡುವುದಿಲ್ಲ. ಆಗ ನಿಮಗೆ ಗೊತ್ತಾಗುತ್ತದೆ.

ಶ್ರೀ ಡಿ.ವಿ. ಸದಾನಂದ ಗೌಡ:- ಅವರು ಇಷ್ಟಾದರೂ ಹೇಳಲಿ, ನಾನು ಪರಿಶೀಲನೆ ಮಾಡುತ್ತೇನೆ, ಸದನದಲ್ಲಿ ಅದಕ್ಕೆ ಬೇಕಾದಂತಹ ಉತ್ತರವನ್ನು ನಾಳೆ ಕೊಡುತ್ತೇನೆಂದು ಹೇಳಲಿ. ಆದರೆ ಈಗ ಇಲ್ಲಿ ಹಾರಿಕೆಯ ಉತ್ತರ ಕೊಡುತ್ತಾರೆ.

ಅಧ್ಯಕ್ಷರು:- ಅವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಪಾಟೀಲ್ ತಾವು ಮಾತನಾಡಿ.

ಶ್ರೀ ಡಿ.ವಿ. ಸದಾನಂದ ಗೌಡ:- ಇದು ಗಾಳಿಯಲ್ಲಿ ಗುದ್ದಾಡುವುದು.

ಶ್ರೀ ಜಗದೀಶ್ ಶೆಟ್ಟರ್:- ಇದು ಬಹಳ ಗಂಭೀರವಾದ ವಿಷಯ.

ಅಧ್ಯಕ್ಷರು:- ನಾಳೆ ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರೆ, ಹಾಗೆ ಹೇಳಿದಮೇಲೂ ಕೂಡ ಅದನ್ನೇ ಇನ್‌ಸಿಸ್ಟ್ ಮಾಡುತ್ತಿದ್ದರೆ.

ಶ್ರೀ ಹೆಚ್. ವಿಶ್ವನಾಥ್:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಲಘುವಾಗಿ ತೆಗೆದುಕೊಂಡಿದ್ದಾರೆ ಎನ್ನುವ ಮಾತನ್ನು ಹೇಳಿದರೂ. ಖಂಡಿತವಾಗಿ ಇಲ್ಲ. ವಿರೋಧ ಪಕ್ಷದ ನಾಯಕರ ಪ್ರಸ್ತಾವನೆಯನ್ನು ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಿದೆ. ನಾವು ಯಾರನ್ನು ಸಂರಕ್ಷಣೆ ಮಾಡುವಂತಹ ಅವಶ್ಯಕತೆ ಇಲ್ಲ, ಅವಕಾಶವೂ ಇಲ್ಲ. ಆದುದರಿಂದ ಅವರು ಏನು ಪ್ರಸ್ತಾವನೆ ಇಲ್ಲಿ ಎತ್ತಿದ್ದಾರೆ ಅದಕ್ಕೆ ವಿವರವಾದಂತಹ ವಿವರಣೆಗಳನ್ನು ಮುಂದೆ ಖಂಡಿತವಾಗಿ ಕೊಡುತ್ತೇನೆ.

ಅಧ್ಯಕ್ಷರು:- ಎಸ್.ಎಸ್. ಪಾಟೀಲ್‌ರವರೇ ತಾವು ಮಾತನಾಡಿ.

(ಈ) ಡಿಸಿಸಿ ಬ್ಯಾಂಕ್ ಚುನಾವಣೆಗಳನ್ನು ಮುಂದಕ್ಕೆ ಹಾಕುತ್ತಿರುವ ಬಗ್ಗೆ

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ):- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸಹಕಾರ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಅತೀಯಾಯಿತು. ತಾವೇ ರಾಜ್ಯಪಾಲರ ಭಾಷಣದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡಬಾರದು ಮಾಡುವುದಿಲ್ಲ ಎನ್ನುವುದನ್ನು ಹೇಳಿದ್ದೀರಿ. ಈ ವರ್ಷ ಹಸ್ತಕ್ಷೇಪ ಮಾಡುತ್ತೇವೆಂದು ಆ ಮಾತನ್ನು ಬಿಟ್ಟಿದ್ದೀರಿ. ಈಗಾಗಲೇ ರಾಜ್ಯದಲ್ಲಿ ಸಹಕಾರ ಸಂಘಗಳ ಚುನಾವಣೆಯನ್ನು, ಚುನಾವಣೆ ನಡೆಯುವ ಹಂತದಲ್ಲಿ ಮುಂದೆ ಹಾಕಿದರು. ಎಲ್ಲಾ ಸ್ಕ್ರೂಟಿನಿ ಮುಗಿದು ವೋಟಿಂಗ್ ಆಗಬೇಕೆನ್ನುವ ಸಮಯದಲ್ಲಿ ಮುಂದೆ ಹೋಗಿದ್ದು ಅದು ತಮಗೆ ಗೊತ್ತಿದೆಯೋ ಇಲ್ಲವೋ, ಏಕೆಂದರೆ ತಮ್ಮ ತಾಯಿಯ ಲಿಂಗೈಕ್ಯಕ್ಕೆ ಹೋಗಿದ್ದಿರಿ ಎಂದು ಕಾಣುತ್ತದೆ. ತಮ್ಮ ಸಹಿ ಆಗಿದೆಯಾ? ಐದು ಜಿಲ್ಲೆಗಳಲ್ಲಿ ಚುನಾವಣೆ ಮುಂದೆ ಹಾಕಿದಿರಿ. ರಾಜ್ಯದಲ್ಲಿ ಮೊದಲನೆ ಸ್ಥಾನದಲ್ಲಿ ಇದ್ದಂತಹ ಬಿಜಾಪುರ ಡಿಸಿಸಿ ಬ್ಯಾಂಕ್ ಚುನಾವಣೆ ಸಹ ಮುಂದೆ ಹಾಕಿದ್ದೀರಿ. ಅದು ಬಹಳ ಉತ್ತಮವಾದಂತಹ ಡಿಸಿಸಿ ಬ್ಯಾಂಕ್. ಹೀಗೆ ಹಸ್ತಕ್ಷೇಪ ಮಾಡಿದರೆ ಅದು ಕೆಡುತ್ತದೆ. ದಯವಿಟ್ಟು ಅದನ್ನು ಅಧಿಕಾರಿಗಳ ಕೈಗೆ ಕೊಡಬೇಡಿ. ನೀವು ಯಾರನ್ನಾದರೂ ಮಾಡಿ, ಆದರೆ ಚುನಾವಣೆ ಮಾಡಿ. ಈಗೇನು ಚುನಾವಣೆ ಮುಂದೆ ಹಾಕಿದ್ದೀರಲ್ಲಾ ಆದರಲ್ಲಿ ಸುಮಾರು ಐದು ಕೋಪರೇಟೀವ್ ಬ್ಯಾಂಕ್ ಚುನಾವಣೆ ಮುಂದೆ ಹಾಕಿರುವಂತಾದ್ದು